ಪ್ರಜಾವಾಣಿ

**Tuesday, February 1st, 2011**

# ಇಂದಿನಿಂದ ಸಿಎಂಎಸ್ ಹಬ್ಬ

ಜೈನ್ ವಿಶ್ವವಿದ್ಯಾಲಯದ ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಮಂಗಳವಾರದಿಂದ ಮೂರು ದಿನ 'ಸಿಎಂಎಸ್ ಉತ್ಸವ 2011' ಆಯೋಜಿಸಿದೆ.

ಇದು ಜೈನ್ ಯುನಿವರ್ಸಿಟಿ ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್‌ನಡಿ ಬರುವ ಎಲ್ಲ ನಾಲ್ಕು ರಾಷ್ಟ್ರೀಯ ಉತ್ಸವಗಳ ಸಮಾಗಮ. ಶಿಕ್ಷಣ ಮತ್ತು ಸಂಸ್ಕೃತಿಯನ್ನು ಸಮೀಕರಿಸುವ, ಮಾನವ ವ್ಯಕ್ತಿತ್ವದ ವಿವಿಧ ಆಯಾಮಗಳನ್ನು ಅನಾವರಣಗೊಳಿಸುವ ವೃತ್ತಿಪರ, ವ್ಯಕ್ತಿಗತ ನೈಪುಣ್ಯ ಹೊರದೆಗೆಯುವ ಕಾರ್ಯಕ್ರಮ. ನಾಟಕೋತ್ಸವ, ವ್ಯವಹಾರ ನೈಪುಣ್ಯ ವೃದ್ಧಿಸಿಕೊಳ್ಳುವ 'ಪ್ರೆಸಿಪಸ್' ಕೂಡ ಇದರ ಭಾಗ.

ಮಂಗಳವಾರದ ಮೊದಲ ವರ್ಷದ ಪದವಿಪೂರ್ವ ವಿದ್ಯಾರ್ಥಿಗಳಿಗೆ 'ಥ್ರೆಶೋಲ್ಡ್'. ಅಸಾಂಪ್ರದಾಯಿಕ ರೂಪ, ವಸ್ತು ವಿಷಯ, ಸ್ಪರ್ಧೆಯ ಗುಣಮಟ್ಟ ಹಾಗೂ ಘಟನಾವಳಿಗಳನ್ನು ಇದು ಒಳಗೊಂಡಿದೆ. ಬುಧವಾರ ಮತ್ತು ಗುರುವಾರ ನಡೆಯುವ 'ಲಾಸ್ಯ' ಕಾರ್ಯಕ್ರಮದಲ್ಲಿ ವರ್ಣ ಮತ್ತು ಸಂಸ್ಕೃತಿಯ ಮಿನುಗು, ನೈಪುಣ್ಯದ ಜಗ, ಮುಕ್ತ ಅಭಿವ್ಯಕ್ತಿಯ ಸದವಕಾಶ. ವೃತ್ತಿಪರ ಮತ್ತು ಸೌಂದರ್ಯಪೂರ್ಣ ಜಾಣ್ಮೆ ತೋರುವ ಅವಕಾಶ. ಸ್ಥಳ: ನಿಮ್ಹಾನ್ಸ್ ಕನ್ವೆನ್‌ಷನ್ ಸೆಂಟರ್, ಹೊಸೂರು ರಸ್ತೆ.